ಓ.ಎಸ್. ನಂ 101/2020
ಡಿ. ಡಬ್ಲ್ಯೂ - 1

**ದಿನಾಂಕಃ 06-03-2025**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮಧ್ಯಂತರ ಅರ್ಜಿಯಲ್ಲಿ ಆದ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ.ಎ.ಎಸ್.ಪಿ ರವರಿಂದಃ

2012 ರಲ್ಲಿ ತಹಸಿಲ್ದಾರ ಕಚೇರಿಗೆ ವಾರಸಾ ಅರ್ಜಿಯನ್ನು ಸಲ್ಲಿಸುವುದಕ್ಕಿಂತ ಮುಂಚೆ ಸದರಿ ಕಚೇರಿಯಿಂದ ನಾನು ವಂಶಾವಳಿ ಪ್ರಮಾಣಪತ್ರವನ್ನು ಪಡೆದುಕೊಂಡಿರುವುದಿಲ್ಲ ಅರ್ಜಿಯನ್ನು ಸಲ್ಲಿಸುವಾಗ ನೀವೇನಾದರು ಅದರ ಜೊತೆಗೆ ದಾಖಲೆಗಳನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನನಗೆ ಅಷ್ಟೊಂದು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. 2012 ರಲ್ಲಿ ಅರ್ಜಿಯನ್ನು ಕೊಡುವಾಗ ನಾನು ಒಬ್ಬನೇ ವಾರಸುದಾರ ಇರುವುದಿಲ್ಲ ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ಅರ್ಜಿಗೆ ಮಲ್ಲೇಶ್ ತಂದೆ ಸಾಂಬಶಿವ ಬಡಗೇರಿ ಎಂಬುವವರು ತಕರಾರನ್ನು ಸಲ್ಲಿಸಿದ್ದರು ಎಂದರೆ ಸರಿ. ನಂತರ ಸದರಿ ಪ್ರಕರಣವನ್ನು ತಕರಾರು ಪ್ರಕರಣ ಆಯಿತು ಎಂದರೆ ಸರಿ. ತಕರಾರು ಪ್ರಕರಣದಲ್ಲಿ ಮಲ್ಲೇಶ್ ತಂದೆ ಸಾಂಬಶಿವ ಬಡಗೇರಿ ಇತನು ಏನಾದರು ಒಪ್ಪಿಗೆ ಪತ್ರ ಅಥವಾ ಪ್ರಮಾಣ ಪತ್ರ ಬರೆದುಕೊಟ್ಟಿರುವನೇ ಎಂದರೆ ಸಾಕ್ಷಿಯು ರಾಜೀ ಆಗಿದ್ದೆವು ಎಂದು ಹೇಳುತ್ತಾನೆ. ನನ್ನ ಹಾಗೂ ಮಲ್ಲೇಶನ ನಡುವೆ ರಾಜೀ ಆಗಿತ್ತು. ಸದರಿ ಒಪ್ಪಿಗೆಯು ಬರವಣಿಗೆಯಲ್ಲಿ ಆಗಿತ್ತಾ ಎಂದರೆ ಸಾಕ್ಷಿಯು ದಾಖಲೆಯಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಸಾಕ್ಷಿಗೆ ನಿಡಿ-4 ಅನ್ನು ತೋರಿಸಲಾಯಿತು. ಅದನ್ನು ಯಾವ ದಿನಾಂಕದಂದು ಕೊಟ್ಟಿರುತ್ತಾರೆ ಹಾಗೂ ಯಾರು ಅರ್ಜಿಯನ್ನು ಕೊಟ್ಟರು ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ . ನಿಡಿ-4 ಅನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದು ಹೇಳುತ್ತಾರೆ.

ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ